ಎನ್ನುವ ಅನುಮಾನದಲ್ಲಿರುತ್ತಾರೆ. ವಾರಕ್ಕೆ, ೧೫ ದಿವಸಕ್ಕೆ ಇಂಥ ಸ್ಪೇಜಿನಲ್ಲಿದೆ ಎಂಬುದನ್ನು ಸಂಬಂಧಪಟ್ಟವರಿಗೆ ತಿಳಿಸಿದರೆ, ಪೋಲೀಸಿನವರಲ್ಲಿ ಒಂದು ರೀತಿಯ ನಂಬಿಕೆ ಬರುತ್ತದೆ. ಅಂಥ ಒಂದು ವ್ಯವಸ್ಥೆಯನ್ನು ಏರ್ಪಾಡು ಮಾಡುತ್ತೀರಾ ?

ಶ್ರೀ ಆರ್. ಎಲ್. ಜಾಲಪ್ಪ.—ಆ ರೀತಿ ಮಾಡುವುದಕ್ಕೆ ಕಷ್ಟವಾಗುತ್ತದೆ. ಅಧಿಕಾರಿಗಳು ತೀವ್ರಗತಿಯಿಂದ ಕಳ್ಳತನಗಳನ್ನು ಪತ್ತೆ ಮಾಡುವಂತೆ ಆ ಬಗ್ಗೆ ಕ್ರಮ ತೆಗೆದುಕೊಳ್ಳುವಂತೆ ತಿಳಿಸುತ್ತೇನೆ.

ಶ್ರೀ ಎಸ್. ಎಸ್. ಕಡಪಟ್ಟಿ.—೫೪ ಪ್ರಕರಣ ವರದಿಯಾಗಿದು, ಆ ಪೈಕಿ ೧೦ ಪ್ರಕರಣಗಳು ಡಿಟೆಕ್ಟ್ ಆಗಿದೆಯೆಂದು ಗೊತ್ತಿದ್ದರೂ, ಎಫಿಸಿಯೆಂಟ್ ಆಗಿ ಕೆಲಸ ಮಾಡುತ್ತಿದ್ದಾರೆಂದು ಹೇಳಿದರೆ ಏನನ್ನೋಣ. ೮೦,೦೦೦ ರೂಪಾಯಿಗಳ ಕಳ್ಳತನವಾಗಿದ್ದರೆ, ಸಿಕ್ಕಿರುವುದು ೬,೪೦೦ ರೂಪಾಯಿಗಳು ಎಂದು ಹೇಳಿದ್ದಾರೆ, ಎಷ್ಟು ಅಂತರ ಇದೆ ಎನ್ನುವುದನ್ನು ವಿಚಾರ ಮಾಡಬೇಕು. ಈ ಇಲಾಖೆಯನ್ನು ಚುರುಕುಗೊಳಿಸುವುದಕ್ಕೆ ಏನು ಕ್ರಮವನ್ನು ಹಮ್ಮಿಕೊಳ್ಳುತ್ತಿರೆಂಬುದನ್ನು ನಿರ್ದಿಷ್ಟವಾಗಿ ತಿಳಿಸಬೇಕು. ಸೇಡಂ ತಾಲ್ಲೂಕಿನಲ್ಲಿ ಮೊನ್ನೆ ಸುಮಾರು ಮೂರು ಲಕ್ಷ ರೂಪಾಯಿಗಳ ಕಳ್ಳತನವಾಗಿರುವುದನ್ನು ಪತ್ತೆ ಮಾಡುವುದಕ್ಕೆ ಸಿ.ಓ.ಡಿ. ತನಿಖೆಗೆ ಆಜ್ಞೆ ಮಾಡುವುದಕ್ಕೆ ಸಾಧ್ಯವೆ ?

ಶ್ರೀ ಆರ್. ಎಲ್. ಜಾಲಪ್ಪ.—ಕಳ್ಳತನದ ಕೇಸುಗಳನ್ನು ಸಿ.ಓ.ಡಿ.ಗೆ ಹಾಕುವುದಕ್ಕೆ ಬರುವುದಿಲ್ಲ. ಕೆಲವು ಸಮಯ ಕಳ್ಳತನ ಮಾಡಿದವರು ಬೇರೆ ರಾಜ್ಯಗಳಿಗೆ ಹೋದರೆ ಹಿಡಿಯುವುದು ಕಷ್ಟವಾಗುತ್ತದೆ. ಹೊರಗಡೆ ಹಿಡಿದವರು ಇವತ್ತು ೧೫-೨೦ ಕೇಸುಗಳಲ್ಲಿ ಕಳ್ಳತನ ಮಾಡಿದ ಮನೆಗಳನ್ನು ತೋರಿಸುತ್ತಿದ್ದಾರೆ. ಒಟ್ಟಿನಲ್ಲಿ ಕಳ್ಳರನ್ನು ಹಿಡಿಯುವುದಕ್ಕೆ ಸರ್ವ ಪ್ರಯತ್ನ ಮಾಡಲಾಗುವುದು.

ಬೆಂಗಳೂರು ವಿಶ್ವವಿದ್ಯಾನಿಲಯದ ವಾಸ್ತುಶಿಲ್ಪ ವಿಭಾಗದ ವಿದ್ಯಾರ್ಥಿಯೊಬ್ಬ ಆತ್ಮಹತ್ಯೆ ಮಾಡಿಕೊಂಡಿರುವುದು

ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ಅಧ್ಯಕ್ಷರೇ, ಬೆಂಗಳೂರು ವಿಶ್ವವಿದ್ಯಾನಿಲಯದ ವಾಸ್ತುಶಿಲ್ಪ ವಿಭಾಗದ ವಿದ್ಯಾರ್ಥಿಯೊಬ್ಬ ಆತ್ಮಹತ್ಯೆ ಮಾಡಿಕೊಂಡಿರುವ ಸಂಬಂಧಪಟ್ಟ ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

೧೦೦ ಪಿ.ಎಂ.

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಮಂತ್ರಿಗಳು).—

ಇದು ಆದಮೇಲೆ ಇವೊತ್ತು ಬೆಳಿಗ್ಗೆ ತಾನೆ ವಾಸ್ತು ಶಿಲ್ಪ ಇಲಾಖಾ ಪರೀಕ್ಷೆಯ ಮುಖ್ಯ ಪ್ರೊಫೆಸರ್ ನನ್ನನ್ನು ಭೇಟಿಯಾಗಿದ್ದರು, ಅವರು ಭೇಟಿಯಾದಾಗ ರಾಜೀನಾಮೆ ಏತಕ್ಕೆ ಕೊಟ್ಟರು ಎನ್ನುವುದನ್ನು ಹೇಳಿದರು. ಕಾಲೇಜಿಗೆ ಸಂಬಂಧಪಟ್ಟ ವಿದ್ಯಾರ್ಥಿಗಳು ಒತ್ತಾಯಪೂರ್ವಕವಾಗಿ ಬರೆಯಿಸಿಕೊಂಡರು ಆದ್ದರಿಂದ ನಾನು ರಾಜೀನಾಮೆ ಕೊಟ್ಟೆ ಒತ್ತಾಯಪೂರ್ವಕವಾಗಿ ಬರೆಸಿದರು ಎಂಬುದನ್ನು ನಾನು ಸೇರಿಸಿದ್ದೇನೆ ಎಂದು ಅವರು ಹೇಳಿದರು. ಆದನ್ನು ಸಹ ಈ ಸಭೆಯ ಗಮನಕ್ಕೆ ತರುವುದಕ್ಕೆ ನಾನು ಇಷ್ಟಪಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ ನನ್ನ ಮೊದಲನೆಯ ಪ್ರಶ್ನೆ ಏನೆಂದರೆ ತಾವು ಈ ದಿನ ಒಂದು ಏಕ ಸದಸ್ಯ ವಿಚಾರಣಾ ಆಯೋಗವನ್ನು ನೇಮಕ ಮಾಡಿದ್ದೀರಿ. ತಾಂತ್ರಿಕ ಫ್ಯಾಕಲ್ಟಿಯ ಡೀನ್ ಆಗಿರುವ ಪ್ರೊಫೆಸರ್ ಎಂ. ಕೆ. ಎಲ್. ಎನ್. ಶಾಸ್ತ್ರಿಯವರನ್ನು ವಾಸ್ತುಶಿಲ್ಪ ವಿಭಾಗದ ಮುಖ್ಯಸ್ಥರನ್ನಾಗಿ ಪೆಚ್ಚುವರಿ ಕಾರ್ಯಭಾರದ ಮೇಲೆ ನೇಮಿಸಲಾಯಿತು ಎಂದು ಹೇಳಿದ್ದೀರಿ. ಈ ಎನ್‌ಕ್ವೈರಿಯ ಟರ್ಮ್ಸ್ ಆಫ್ ರೆಫರೆನ್ಸ್ ಏನು ? ಯಾವ ಯಾವ ವಿಷಯಗಳ ಬಗ್ಗೆ ಎನ್‌ಕ್ವೈರಿ ಮಾಡುತ್ತಾರೆ, ಈ ಎನ್‌ಕ್ವೈರಿ ಏತಕ್ಕೋಸ್ಕರ ? ಈ ಹುಡುಗ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಇಲ್ಲಿ ಎನ್‌ಕ್ವೈರಿ ಮಾಡತಕ್ಕ ಅಧಿಕಾರ ಇದೇಯೇ, ಇದರ ಬಗ್ಗೆ ಮಾನ್ಯ ಮಂತ್ರಿಗಳು ವಿವರಣೆಯನ್ನು ಕೊಡಬೇಕಾಗುತ್ತದೆ.

ಶ್ರೀ ಜೀವರಾಜ ಆಳ್ವ.—ವಾಸ್ತುಶಿಲ್ಪ ವಿಭಾಗದ ವಿದ್ಯಾರ್ಥಿಗಳು ಕಂಪ್ಲೇಂಟ್ ಮಾಡಿದ್ದಾರೆ. ಅದರ ಬಗ್ಗೆ ಸ್ಥೂಲವಾಗಿ ವಿಚಾರಣೆ ಮಾಡಲಂ ಆದೇಶ ನೀಡಿ ೧೦ ದಿವಸಗಳೊಳಗೆ ವರದಿ ಕೊಡಬೇಕೆಂದು ತಿಳಿಸಲಾಗಿದೆ.

ಶ್ರೀ ಎಂ ಎಸ್. ಕೃಷ್ಣನ್.—ವಾಸ್ತುಶಿಲ್ಪ ವಿಭಾಗದ ವಿದ್ಯಾರ್ಥಿಗಳ ಪರೀಕ್ಷೆಗೆ ಸಂಬಂಧಪಟ್ಟಂತಹ, ಹಾಗೂ ಅವರ ಪತ್ರಿಕೆಗಳ ವ್ಯಾಲ್ಯುಯೇಷನ್‌ಗೆ ಸಂಬಂಧಪಟ್ಟಂತೆ ಅನ್ಯಾಯವಾಗಿರಂವುದನ್ನು ಸರಿಪಡಿಸಲಿಕ್ಕೆ ಕೊಟ್ಟಿದ್ದಾರೆ. ಈಗ ಒಬ್ಬ ಹುಡುಗ ಡೆಸ್‌ಪರೇಟ್ ಆಗಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಈ ಕರಹದ ಪರಿಸ್ಥಿತಿ ಅಲ್ಲಿ ಬಂದಿದೆ. ಈ ಹುಡುಗ ಆತ್ಮಹತ್ಯೆ ಏನು ಮಾಡಿಕೊಂಡಿದ್ದಾನೆ ಅದರ ಬಗ್ಗೆ ಎನ್‌ಕ್ವಯಿರಿ ನಡೆಸುವಂತಹ ಯೋಜನೆ ಇದೆಯೇ ? ಅದರ ಬಗ್ಗೆ ಏನಾದರೂ ಮಾಡುತ್ತಾರೆಯೇ, ಏಜೆನ್ಸಿ ಅದು ಯಾವುದೇ ಇರಲಿ ಇವರು ಯಾವ ಯಾವುದನ್ನು ಮಾಡುತ್ತಾರೆಂದು ತಿಳಿಸಬೇಕು. ಟಿಮ್ರ್ಸ್ ಆಫ್ ರೆಫರೆನ್ಸ್ ಏನು ಎನ್ನುವುದನ್ನು ತಾವು ತಿಳಿಸಬೇಕು.

ಬೆಂಗಳೂರು ವಿಶ್ವವಿದ್ಯಾನಿಲಯದ ವಾಸ್ತು ಶಿಲ್ಪ ವಿಭಾಗದ ವಿದ್ಯಾರ್ಥಿಗಳು ದಿನಾಂಕ ೨೭-೧-೧೯೮೮ ರಂದು ಆ ವಿಶ್ವವಿದ್ಯಾನಿಲಯದ ಉಪಕುಲಪತಿಗಳಿಗೆ ಸಲ್ಲಿಸಿದ ಮನವಿಯಲ್ಲಿ ಸದರಿ ಇಲಾಖೆಯ ವಿದ್ಯಾರ್ಥಿಗಳಿಗೆ ತರಗತಿಯಂ ಅಂಕಗಳನ್ನು ನೀಡುವಲ್ಲಿ ಅನ್ಯಾಯ ನಡೆದಿದ್ದು, ಅದರ ಪರಿಣಾಮವಾಗಿ ಒಬ್ಬ ವಿದ್ಯಾರ್ಥಿಯು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ತಿಳಿಸಿದರು. ಈ ವಿಷಯದ ಬಗ್ಗೆ ತನಿಖೆ ನಡೆಸಿ, ೧೦ ದಿನಗಳೊಳಗೆ ವರದಿ ನೀಡಂವಂತೆ ಉಪಕುಲಪತಿಗಳು ನಿವೃತ್ತ ಜಿಲ್ಲಾ ನ್ಯಾಯಾಧೀಶ ಹಾಗೂ ಸ್ಪೆಷಲ್ ಜಡ್ಜ್ ಆದ ಶ್ರೀ ಆರ್. ಸಿ. ಕ್ಯಾಸಿಲಿನೋ ಅವರ ನೇತೃತ್ವದಲ್ಲಿ ಏಕ ಸದಸ್ಯ ವಿಚಾರಣಾ ಆಯೋಗವನ್ನು ನೇಮಿಸಿದರು.

ನಂತರ ದಿನಾಂಕ ೨೮-೧-೧೯೮೮ ರಂದು ಜ್ಞಾನಭಾರತಿ ಕ್ಯಾಂಪಸ್‌ನ ವಿದ್ಯಾರ್ಥಿಗಳು ಮೆರವಣಿಗೆಯಲ್ಲಿ ಬಂದು ಕೆಳಕಂಡ ಬೇಡಿಕೆಗಳನ್ನು ಸಲ್ಲಿಸಿದರು.

೧) ವಾಸ್ತುಶಿಲ್ಪ ಇಲಾಖಾ ಪರಿಷತ್ತಿನ ಅಧ್ಯಕ್ಷರನ್ನು ವಜಾ ಮಾಡುವುದು.

೨) ಪಕ್ಷಪಾತವಿಲ್ಲದೆ ವಿಚಾರಣೆ ನಡೆಸುವುದು.

೩) ಪರೀಕ್ಷಾ ಪದ್ಧತಿಯನ್ನು ಪುನರ್ ರಚಿಸುವುದು.

೪) ಥಿಯರಿ ಹಾಗೂ ಪ್ರಾಯೋಗಿಕ ಪರೀಕ್ಷೆಗಳಿಗೆ ಹೊರಗಿನವರಿಂದ ಮೌಲ್ಯ ಮಾಪನ ಮಾಡಿಸುವುದು.

ಮೇಲಿನ ಬೇಡಿಕೆಗಳ ಬಗ್ಗೆ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ದಿನಾಂಕ ೧-೨-೧೯೮೮ ರಂದು ತೆಗೆದುಕೊಂಡ ಕ್ರಮಗಳು ಕೆಳಗಿನಂತಿವೆ.—

೧) ವಾಸ್ತು ಶಿಲ್ಪ ಇಲಾಖಾ ಪರಿಷತ್ತಿನ ಅಧ್ಯಕ್ಷರಲ್ಲದೆ ಇತರೆ ಮೂರು ಜನ ಉಪನ್ಯಾಸಕರ ರಾಜೀನಾಮೆಗಳನ್ನು ಕೂಡಲೇ ಅಂಗೀಕರಿಸಿತು.

೨) ಉಪಕುಲಪತಿಗಳು ನೇಮಿಸಿದ ಏಕ ಸದಸ್ಯ ವಿಚಾರಣಾ ಆಯೋಗಕ್ಕೆ ಸಮ್ಮತಿಸಿತು.

೩) ವಾಸ್ತು ಶಿಲ್ಪ ವಿಭಾಗಕ್ಕೆ ಉಪಕುಲಪತಿಗಳು ಹೊಸದಾಗಿ ರಚಿಸಿದ ಮೌಲ್ಯಮಾಪನ ಸಮಿತಿಗೆ ಹಾಗೂ ಹೊರಗಿನವರಿಂದ ಮೌಲ್ಯಮಾಪನ ಮಾಡಿಸಲು ಮಾಡಿದ ನೇಮಕಾತಿಗೆ ಸಮ್ಮತಿಸಿತು.

೪) ಬರುವ ಫೆಬ್ರುವರಿ. ಮಾರ್ಚ್ ತಿಂಗಳ ವಾಸ್ತುಶಿಲ್ಪ ವಿಭಾಗದ ಉತ್ತರ ಪತ್ರಿಕೆಗಳನ್ನು ಹೊರಗಿನವರಿಂದ ಮೌಲ್ಯಮಾಪನ ಮಾಡಿಸಲು ಒಪ್ಪಿತು.

೫) ಈಗ ತಾಂತ್ರಿಕ ಫ್ಯಾಕಲ್ಟಿಯ ಡೀನ್ ಆಗಿರುವ ಪ್ರೊಫೆಸರ್ ಎಂ.ಕೆ.ಎಲ್.ಎನ್, ಶಾಸ್ತ್ರಿ ಯಂಪರನ್ನು ವಾಸ್ತುಶಿಲ್ಪ ವಿಭಾಗದ ಮುಖ್ಯಸ್ಥರನ್ನಾಗಿ ಹೆಚ್ಚುವರಿ ಕಾರ್ಯಭಾರದ ಮೇಲೆ ನೇಮಿಸಲಾಯಿತು.

ಸದರಿ ವಿಷಯಂ ಇಲ್ಲಿಗೆ ಕೊನೆಗೊಂಡಿದ್ದು, ದಿನಾಂಕ ೨-೨-೧೯೮೮ ರಿಂದ ವಿದ್ಯಾರ್ಥಿಗಳು ತರಗತಿಗಳಿಗೆ ಹಾಜರಾಗುತ್ತಿದ್ದಾರೆ

ಶ್ರೀ ಜೀವರಾಜ ಆಳ್ವ.— ಆಕ್ಚುಯಲ್ ಟರ್ಮ್ಸ್ ಆಫ್ ರೆಫರೆನ್ಸನ್ನು ತರಿಸಬೇಕಾಗುತ್ತದೆ. ಆ ಹುಡುಗ ಆತ್ಮಹತ್ಯೆ ಮಾಡಿಕೊಂಡಿರುವುದು ಆದು ಒಂದು ಘಟನೆ. ಈ ಕಾರಣದಿಂದಲೇ ಆ ಹುಡುಗ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದಂ ವಿದ್ಯಾರ್ಥಿಗಳು ತಿಳಿಸಿದ್ದಾರೆ ಆದರ ಜೊತೆಗೆ ಅವರ ಬೇಡಿಕೆ ಕೂಡ ತಿಳಿಸಿದ್ದಾರೆ. ಈಗ ಇದಕ್ಕೆ ಎನ್‌ಕ್ವಯಿರಿ ಮಾಡಿಸಬೇಕಾ, ಎನ್‌ಕ್ವಯಿರಿ ಆಫ್ ರೀಸ್ಟ್ರಕ್ಚರ್ ಆಫ್ ಎಕ್ಸಾಮಿನೇಷನ್ ಅಂಡ್ ಎಕ್ಸ್‌ಟರ್ನಲ್ ವ್ಯಾಲ್ಯುಯೇಷನ್ ಬೋತ್ ಥಿಯರೀಸ್ ವಾಸ್ತುಶಿಲ್ಪ ಡಿಪಾರ್ಟ್‌ಮೆಂಟ್‌ನಲ್ಲಿ ಬಹಳ ಅನ್ಯಾಯ ನಡೆಯುತ್ತಿದೆ. ಪೂರ್ಣವಾಗಿ ತನಿಖೆ ಆಗಬೇಕೆಂದು ಹೇಳಿದ್ದಾರೆ. ತಮಗೆ ಆಕ್ಚುಯಲ್ ಟರ್ಮ್ಸ್ ಆಫ್ ರೆಫರೆನ್ಸ್ ಕೂಡ ನಾನು ನಂತರ ತರಿಸಿಕೊಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.— ಅಲ್ಲಿ ಯಾವ ತರಹ ಅನ್ಯಾಯಗಳು ಆಗುತ್ತವೆ ಎನ್ನುವುದನ್ನು ವಿದ್ಯಾರ್ಥಿಗಳು ತಿಳಿಸಿರುತ್ತಾರೆ. ಎಕ್ಸಾಮಿನೇಷನ್ ನಡೆಯುವ ವಿಷಯದಲ್ಲಿ. ಎಕ್ಸಾಮಿನೇಷನ್ ಪ್ರಾರಂಭವಾಗುವ ವಿಷಯದಲ್ಲಿ ಎಕ್ಸಾಮಿನೇಷನ್ ತಾರೀಖಿನ ಬಗ್ಗೆ, ಮಂತ್ಲಿ ಕೌಂಟಿಂಗ್ ಬಗ್ಗೆ ಎಲ್ಲದರಲ್ಲೂ ತಕರಾರು ಇದೆ. ಇವೊತ್ತಿನ ದಿವಸ ಟೆಕ್ನಿಕಲ್ ಕಾಲೇಜು, ಇಂಜಿನಿಯರಿಂಗ್ ಕಾಲೇಜು, ಮೆಡಿಕಲ್ ಕಾಲೇಜು ಏನಿವೆ ಇಲ್ಲಿ ಈರೀತಿಯ ತೊಂದರೆಗಳು ಜಾಸ್ತಿಯಾಗುತ್ತಿವೆ. ಅನೇಕ ವಿದ್ಯಾರ್ಥಿಗಳು ಕಂಪ್ಲೇಂಟ್ ಮಾಡಿರತಕ್ಕದ್ದು ತಮ್ಮ ಗಮನಕ್ಕೆ ಬಂದಿರುತ್ತದೆ. ೮೫-೯೦ ಪರ್‌ಸೆಂಟ್ ಬರುತ್ತದೆಂದು ಎಕ್ಸ್‌ಪೆಕ್ಟ್ ಮಾಡಿಕೊಂಡಿದ್ದ ವಿದ್ಯಾರ್ಥಿಗಳು ನಪಾಸು ೨೦-೩೦ ಪರ್‌ಸೆಂಟ್ ಬಂದಿದೆ, ನಾವೆಲ್ಲಾ ಫಸ್ಟ್‌ಕ್ಲಾಸ್ ಬರಬೇಕಾಗಿತ್ತು ಇದರಲ್ಲಿ ತಾರತಮ್ಯ ಆಗಿದೆ ಎಂದು ಹೇಳುತ್ತಿದ್ದಾರೆ. ಇನ್ನು ರೀವ್ಯಾಲ್ಯುಯೇಷನ್‌ಗೆ ಯಾರಿಗೆ ಅಧಿಕಾರ ಕೊಟ್ಟಿದ್ದೀರಿ ? ಅದರಲ್ಲಿಯೂ ಸಹ ೩೦-೩೫ ಪರ್‌ಸೆಂಟ್‌ಗೆ ಫಿಕ್ಸ್ ಮಾಡಿದ್ದಾರೆ. . . ರೀ ವ್ಯಾಲ್ಯುಯೇಷನ್ ಮಾಡಿ ಅದಕ್ಕಿಂತ ಹೆಚ್ಚಿಗೆ ಮಾರ್ಕ್ಸ್ ಕೊಟ್ಟರೆ ಆಗ ಅದು ಪ್ರೊಫೆಸರ್‌ಗಳ ಫ್ರೆಟರ್ನಿಟಿಗೆ ಅನ್ಯಾಯವಾಗುತ್ತದೆ. ಮತ್ತು ಇದಕ್ಕೆ ಮುಂಚಿತವಾಗಿ ಯಾರು ವ್ಯಾಲ್ಯುಯೇಷನ್ ಮಾಡಿದ್ದರು ಅವರಮೇಲೆ ಕ್ರಮ ತೆಗೆದುಕೊಳ್ಳಬೇಕಾದ ಪರಿಸ್ಥಿತಿ ಬರುತ್ತದೆ. ಆದ್ದರಿಂದ ಇವರೆಲ್ಲರೂ ಸೇರಿ ಒಂದು ರೀತಿಯ ಸಿಂಡಿಕೇಟ್ ತರಹ ಮಾಡಿಕೊಂಡು ರೀ ವ್ಯಾಲ್ಯುಯೇಷನ್ ಆಗದಂತೆ ನೋಡಿಕೊಳ್ಳುತ್ತಿದ್ದಾರೆ. ೩೦ ಅಥವಾ ೩೧ ಅಂದರೆ ಮೊದಲು ವ್ಯಾಲ್ಯು ಮಾಡಿದವರು ಎಷ್ಟು ಮಾರ್ಕ್ಸ್ ಕೊಟ್ಟಿರುತ್ತಾರೆ ಅದಕ್ಕೆ ಒಂದು ಅಥವಾ ಎರಡು ಮಾರ್ಕ್ಸ್ ಹೆಚ್ಚಿಗೆ ಕೊಡುತ್ತಾರೆಂಬ ದೂರುಗಳು ಬಹಳ ಬರುತ್ತಿವೆ. ಆರ್ಕಿಟೆಕ್ಚರ್, ಅವುಗಳ ಬಗ್ಗೆ ಏನಂ ಕ್ರಮ ತೆಗೆದುಕೊಳ್ಳುವುದಕ್ಕೆ ಯೋಚನೆ ಮಾಡಿದ್ದೀರಿ ?

ಶ್ರೀ ಜೀವರಾಜ ಆಳ್ವ.— ಮಾನ್ಯ ಸಭಾಪತಿಯವರೆ, ವಿಶ್ವವಿದ್ಯಾನಿಲಯದಲ್ಲಿ ರೀವ್ಯಾಲ್ಯುಯೇಷನ್ ಮಾಡುವಾಗ ವಿಶ್ವವಿದ್ಯಾನಿಲಯದ ಹೊರಗಿನ ಮೌಲ್ಯ ಮಾಪಕರನ್ನು ಕರೆಯಿಸಿ ವ್ಯಾಲ್ಯು ಮಾಡಿಸುತ್ತಿದ್ದೇವೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಪ್ರೊಫೆಸರ್ ಆಗಲಿ, ಅಥವಾ ಸ್ಟಾಫ್ ಆಗಲಿ ಅಲ್ಲಿರುವುದಿಲ್ಲ. ಆದ್ದರಿಂದ ತಾವು ಹೇಳಿರುವಂಥ ತಪ್ಪು ಅಲ್ಲಿ ಆಗಿರುವುದಿಲ್ಲವೆಂದು ನನ್ನ ಭಾವನೆ. ಇನ್ನು ತಾವು ಟರ್ಮ್ಸ್ ಆಫ್ ರೆಫರೆನ್ಸನ್ನು ಕೇಳಿದ್ದೀರಿ. ಅದು ಈಗ ನನಗೆ ಬಂದಿದೆ. ಅದು ಈ ರೀತಿ ಇದೆ. The One Man Committee will look into the following.

i) Grievances of the students of the department of architecture regarding class and marks awarded

ii) The fears expressed by students, that harassment is done, if so, what extent it is true

iii) Whether Award of sessional marks was biased in any manner and malpractices if any, in the Department of Architecutre as alleged in the representation of the Students Any other allied matters.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಟರ್ಮ್ಸ್ ಆಫ್ ರೆಫರೆನ್ಸನ್ನು ಓದಿದಮೇಲೆ ಇನ್ನೂ ಸ್ವಲ್ಪ ಕ್ಲಾರಿಟಿ ಬಂತು, ಅದರಲ್ಲಿ You have also mentioned not only about injustice but harassment also. Harassment to any body is punishable. It is a crime committed against a person who has